OS No.95/2018 PW-**1**

**<u>ದಿನಾಂಕ 02.06.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : 2 ರಿಂದ 4 ನೇ ಪ್ರತಿವಾದಿಗಳ ಪರ ಶ್ರೀ ಕೆ ಟಿ ಟಿ ವಕೀಲರಿಂದ :</u>**

ನನ್ನ ಸ್ವಂತ ಊರು ನಾಗೇಗೌಡನಪಾಳ್ಯ, ತಲಘಟ್ಟ ಪುರ ಬೆಂಗಳೂರು. ದಾವಾ ಸ್ವತ್ತನ್ನು ಮಾರಾಟ ಮಾಡುತ್ತಾರೆಂದು ನಮ್ಮ ಊರಿನಲ್ಲಿರುವ ನನ್ನ ಮಾವನಾದ ಗೋಪಾಲಯ್ಯರವರು ತಿಳಿಸಿರುತ್ತಾರೆ ಮತ್ತು ಮತ್ತೊಬ್ಬರಾದ ನನ್ನ ಸಂಬಂಧಿಕರು ಪುಟ್ಟಗಿರಿಗೌಡ ರವರು ತಿಳಿಸಿರುತ್ತಾರೆ. ದಿನಾಂಕ 10.06.2018 ರಂದು ನನಗೆ ಮಾರಾಟದ ಬಗ್ಗೆ ತಿಳಿಸಿರುತ್ತಾರೆ. ನಾನು ಹೋಗಿ ಸದರಿ ಸ್ಥಳವನ್ನು ನೋಡಿರುತ್ತೇನೆ. ಸದರಿ ಜಮೀನನ್ನು ನೋಡಿದ 2 ದಿನಕ್ಕೆ ವ್ಯಾಪಾರ ಆಗಿರುತ್ತದೆ. ಸದರಿ ವ್ಯಾಪಾರ ಆದ ಸಮಯದಲ್ಲಿ 1 ನೇ ಪ್ರತಿವಾದಿ ರಾಜುರವರು ಯಾವುದೋ ಒಂದು ಇಲಾಖೆಯಲ್ಲಿ ಕೆಲಸ ಮಾಡಿಕೊಂಡಿದ್ದರು. 1 ನೇ ಪ್ರತಿವಾದಿ ರಾಜುರವರು ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಅವರು ಕೆಲಸ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ವ್ಯಾಪಾರವಾಗುವುದಕ್ಕಿಂತ ಮೊದಲು ಸದರಿ ಜಮೀನಿಗೆ ಸಂಬಂದಪಟ್ಟಂತಹ ದಾಖಲಾತಿಗಳನ್ನು ನೋಡಿರುತ್ತೇನೆ. ನಾನು ಸದರಿ ಜಮೀನು ಪಿತ್ರಾರ್ಜಿತ ಆಸ್ತಿಯಾಗಿದ್ದು, ಆ ಬಗ್ಗೆ ನೊಂದಾಯಿತ ದಾಖಲೆಗಳನ್ನು ನೋಡಿರುತ್ತೇನೆ. ಯಾವುದೋ ಒಂದು ದಾಖಲೆಯನ್ನು ನೋಡಿರುತ್ತೇನೆ ಯಾವುದು ಎಂದು ನೆನಪಿಲ್ಲ. ನಾನು ಸದರಿ ಜಮೀನನ್ನು ನೋಡಲು ಹೋದಾಗ ಸದರಿ ಜಮೀನಿಗೆ ಸಂಬಂದಪಟ್ಟ ಯಾವುದೇ ದಾಖಲೆಯನ್ನು ಪ್ರತಿವಾದಿಯಿಂದ ಕೇಳಿ ಪಡೆದುಕೊಂಡಿಲ್ಲ. ಪ್ರತಿವಾದಿಯವರು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆಂದರೆ ಹೌದು. ಪ್ರತಿವಾದಿಯವರಿಗೆ ಬೆಂಗಳೂರಿನಲ್ಲಿ ಸ್ವಂತ ಮನೆ ಇದೆ ಎಂದರೆ ಹೌದು. ಪ್ರತಿವಾದಿಯವರಿಗೆ ಅವರ ಊರಿನಲ್ಲಿ ಅವರಿಗೆ ಸೇರಿದಂತಹ ಸ್ವಂತ ಮನೆ ಯಾವುದೂ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

2. ದಾವಾ ಸ್ವತ್ತನ್ನು ನೋಡಲು ಬಂದಾಗ ನನ್ನ ಜೊತೆ 1 ನೇ ಪ್ರತಿವಾದಿಯವರು ಬಂದಿರಲಿಲ್ಲ. ಸದರಿ ಜಮೀನಿನ ಬಗ್ಗೆ 1 ನೇ ಪ್ರತಿವಾದಿಯ ಬೆಂಗಳೂರಿನ ಮನೆಯಲ್ಲಿ ವ್ಯಾಪಾರವಾಗಿರುತ್ತದೆ. ನಮ್ಮ ಕಡೆಯಿಂದ ನಾನು ನನ್ನ ತಂದೆ ಹೋಗಿರುತ್ತೇವೆ ಪ್ರತಿವಾದಿ ಕಡೆಯಿಂದ ಗೋಪಾಲಯ್ಯ ಪುಟ್ಟ ಗಿರಿಗೌಡರವರು ಬಂದಿರುತ್ತಾರೆ. ಸದರಿ ವ್ಯಾಪಾರಕ್ಕೆ ಬೆಳಗ್ಗೆ ಹೋಗಿರುತ್ತೇವೆ ಆದರೆ ಎಷ್ಟು ಗಂಟೆಗೆ ಎಂದು ನನಗೆ ನೆನಪಿಲ್ಲ. 1 ನೇ ಪ್ರತಿವಾದಿಯವರಿಗೆ ಎಷ್ಟು ಜನ ಮಕ್ಕಳು ಎಂದು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ವ್ಯಾಪಾರ ಆಗುವ ಸಮಯದಲ್ಲಿ 1 ನೇ ಪ್ರತಿವಾದಿಯವರ ಮಕ್ಕಳು ಮನೆಯಲ್ಲಿ ಇರಲಿಲ್ಲ. 1 ನೇ ಪ್ರತಿವಾದಿಯವರ ಮಕ್ಕಳು ಇಬ್ಬರು ಆ ಸಮಯದಲ್ಲಿ ವಯಸ್ಕರರಾಗಿದ್ದರು. 1 ನೇ ಪ್ರತಿವಾದಿಯವರ ಮಕ್ಕಳು ಅವರಿಬ್ಬರು ಬಿ.ಇ ವ್ಯಾಸಂಗ ಮಾಡಿ ಡಿಗ್ರಿ ತೆಗೆದುಕೊಂಡಿದ್ದರು ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯವರ ಕುಟುಂಬಕ್ಕೆ ಸೇರಿದ ವಂಶವೃಕ್ಷ್ಯವನ್ನು ನಾನು ಪಡೆದುಕೊಂಡಿರುತ್ತೇನೆ ಅದನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸದರಿ ದಿನ ಸದರಿ ಜಮೀನಿನ ವ್ಯಾಪಾರ ಸುಮಾರು ಎಷ್ಟು ಗಂಟೆಗಳ ಕಾಲ ಆಗಿತ್ತು ಎಂದು ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ಸುಮಾರು 1 ಗಂಟೆಗಳ ಕಾಲ ನಡೆದಿರುತ್ತದೆ.

3. ಕರಾರು ಪತ್ರಕ್ಕೆ ಛಾಪಾ ಕಾಗದವನ್ನು ನಾನೇ ತಂದಿರುತ್ತೇನೆ. ಸದರಿ ಕಾಗದವನ್ನು ವ್ಯಾಪಾರವಾಗುವುದಕ್ಕಿಂತ ಮುಂಚೆಯೇ ತಂದಿರುತ್ತೀರೋ ಅಥವಾ ವ್ಯಾಪಾರ ಆದ ನಂತರ ತಂದಿರುತ್ತೀರಾ ಎಂದರೆ ಸಾಕ್ಷಿ ವ್ಯಾಪಾರ ಆದ ನಂತರ ಜೂನ್ 2018 ರಲ್ಲಿ ತಂದಿರುತ್ತೇನೆ. ಸದರಿ ದಿನ ವ್ಯಾಪಾರದ ಮಾತುಕತೆ 11 ಗಂಟೆಯೊಳಗೆ ಮುಗಿದಿರುತ್ತದೆ. ಸದರಿ ವ್ಯಾಪಾರದ ಮಾತುಕತೆ ಮುಗಿದ ನಂತರ ಆದ ತಕ್ಷಣ ನಾನು ಛಾಪಾ ಕಾಗದವನ್ನು ತಂದು ಟೈಪ್ ಮಾಡಿಸಿರುತ್ತೇನೆ. ಛಾಪಾ ಕಾಗದದ ಮೇಲೆ ಟೈಪ್ ಮಾಡಿಸಲು ಎಷ್ಟು ಗಂಟೆಯಾಗಿರುತ್ತದೆ ಎಂದು ಈಗ ನೆನಪಿಲ್ಲ ಸುಮಾರು 2 ಗಂಟೆಗಳ ಕಾಲ ಆಗಿರುತ್ತದೆ ಎಂದರೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ವ್ಯಾಪಾರ ಆದ ನಂತರ ನಿಪಿ-1 ರ ದಾಖಲೆಯನ್ನು ತಯಾರಿಸಿಕೊಟ್ಟಂತಹ ವಕೀಲರ ಕಛೇರಿಗೆ ಎಷ್ಟು ಗಂಟೆ ಹೋಗಿರುತ್ತೇವೆ ಎಂದು ನೆನಪಿಲ್ಲ. ನಿಪಿ-1 ರ ದಾಖಲೆಗೆ ಒಕ್ಕಣೆಯನ್ನು ಬೆರಳಚ್ಚು ಮಾಡಿಸಲು 1 ನೇ ಪ್ರತಿವಾದಿಯವರೇ ಹೇಳಿರುತ್ತಾರೆ. ನಿಪಿ-1 ರ ದಾಖಲೆ ಆದಂತಹ ದಿನಾಂಕ ಯಾವ ವಾರದಂದು ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರ

ದಾಖಲೆಯಾಗಿದೆ ಎಂದು ಹೇಳುವ ದಿನಾಂಕದಂದು 1 ನೇ ಪ್ರತಿವಾದಿಯವರು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಅವರು ಕೆಲಸ ಮಾಡುತ್ತಿದ್ದರೋ ಇಲ್ಲವೋ ಎಂದು ಗೊತ್ತಿಲ್ಲ ಆದರೆ ನಮ್ಮ ಜೊತೆ ಸಹಿ ಮಾಡಲು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಿನ ನಾವು ವ್ಯಾಪಾರಕ್ಕೆ ಹೋದ ನಂತರ ನಿಪಿ-1 ರ ದಾಖಲೆಯಾಗುವವರೆಗೂ ನಮ್ಮ ಜೊತೆಯಲ್ಲಿಯೇ ಇದ್ದರು. ನಿಪಿ-1 ರ ದಾಖಲೆಯಾಗುವ ಸಮಯದಲ್ಲಿ 1 ನೇ ಪ್ರತಿವಾದಿಯವರ ಅಣ್ಣ ತಮ್ಮದಿರು ಯಾರಾದರು  ಭಾಗವಹಿಸಿರುತ್ತಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ ಪತ್ರದಲ್ಲಿ 1 ನೇ ಪ್ರತಿವಾದಿಯವರ ಇಬ್ಬರೂ ಮಕ್ಕಳುಗಳ ಹೆಸರನ್ನು ಬರೆದಿರುತ್ತಾರೆಂದರೆ ಹೌದು. ನಿಪಿ-1 ರ ಪತ್ರದಲ್ಲಿ 1 ನೇ ಪ್ರತಿವಾದಿಯವರ ಮಕ್ಕಳ ಸಹಿಗಳು ಇಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯವರ ಇಬ್ಬರು ಮಕ್ಕಳು ಆಸ್ತಿಯನ್ನು ಮಾರಾಟ ಮಾಡಲು ನಮ್ಮದೇನು ಅಭ್ಯಂತರ ಇಲ್ಲ ಎಂದು ಆಥಾರೈಶೇನ್ ಲೆಟರ್ ಅನ್ನು ಕೊಟ್ಟಿಲ್ಲ. 1 ನೇ ಪ್ರತಿವಾದಿಯವರ ಇಬ್ಬರೂ ಮಕ್ಕಳು ಸದರಿ ಜಮೀನಿನ ವ್ಯಾಪಾರದಲ್ಲಿ ಭಾಗಿಯಾಗಿಲ್ಲ. ನಿಪಿ-1 ರ ಕರಾರು ಪತ್ರದಲ್ಲಿ ಕ್ರಮವಾದ ಕ್ರಯ ಪತ್ರ ಬರೆದುಕೊಡುವ ವೇಳೆ ನನ್ನ ಮಕ್ಕಳ ಸಹಿಯನ್ನು ಮಾಡಿಸಿಕೊಡುತ್ತೇನೆ ಎಂದು ನಮೂದು ಮಾಡಿಲ್ಲ. ವ್ಯಾಪಾರ ಮಾಡಿದಂತಹ ಜಮೀನು ಮಳೆ ಆಶ್ರಿತ ಬಯಲು ಸೀಮೆ ಜಮೀನಾಗಿರುತ್ತದೆ. ನಾನು ನೋಡಿದಂತಹ ಸಂದರ್ಭದಲ್ಲಿ ಸದರಿ ಜಮೀನು ಹೊಲವಾಗಿತ್ತು . ನನಗೆ ಜಮೀನನ್ನು ಗೋಪಾಲಯ್ಯ ಮತ್ತು ಪುಟ್ಟಗಿರಿಗೌಡರವರು ತೋರಿಸಿರುತ್ತಾರೆ. ನಾನು ಸದರಿ ಜಮೀನನ್ನು ನೋಡಿದಂತಹ ಸಂದರ್ಭದಲ್ಲಿ 1 ನೇ ಪ್ರತಿವಾದಿಯವರು ರಾಜುರವರ ಅಣ್ಣ ತಮ್ಮಂದಿರಾಗಲೀ ಅಥವಾ 1 ನೇ ಪ್ರತಿವಾದಿಯವರ ಮಕ್ಕಳಾಗಲೀ ಇರಲಿಲ್ಲ ಎಂದರೆ ಹೌದು. ಸದರಿ ದಿನ ಯಾವುದೇ ರೀತಿಯ ವ್ಯಾಪಾರ ನಡೆದಿಲ್ಲ, ಪುಟ್ಟಗಿರಿಗೌಡ ಮತ್ತು ನನ್ನ ಮಾವ ಗೋಪಾಲಯ್ಯ ಮತ್ತು ನಾನು ಸೇರಿಕೊಂಡು ಬಲತ್ಕಾರವಾಗಿ 1 ನೇ ಪ್ರತಿವಾದಿಯ ಸಹಿಯನ್ನು ನಿಪಿ-1 ರಲ್ಲಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ 1 ನೇ ಪ್ರತಿವಾದಿಯ ಸಹಿಯನ್ನು ಬಲತ್ಕಾರವಾಗಿ ಪಡೆದುಕೊಂಡ ನಂತರ 1 ನೇ ಪ್ರತಿವಾದಿಯ ಅಣ್ಣ ತಮ್ಮಂದಿರು ಸದರಿ ದಾಖಲೆಗೆ ನಮ್ಮ ಒಪ್ಪಿಗೆ ಇಲ್ಲ ನಿಮ್ಮ ಹಣವನ್ನು ವಾಪಸ್ಸು ಪಡೆದುಕೊಳ್ಳಿ ಎಂದು ಹೇಳಿರುತ್ತಾರೆಂದರೆ ಸುಳ್ಳು. ಆ ರೀತಿ 1 ನೇ

ಪ್ರತಿವಾದಿಯ ಅಣ್ಣ ತಮ್ಮಂದಿರು ಹೇಳಿದ ತಕ್ಷಣವೇ ನಾನು ಈ ದಾವಾನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರ ದಾಖಲೆಯಲ್ಲಿನಮೂದಿಸಿದ ಹೆಚ್ ವೆಂಕಟೇಶ್ ಎಂದರೆ ನಾನು, ಹೊನ್ನಪ್ಪ ಎಂದರೆ ನನ್ನ ತಂದೆ.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.